ಹಾಸನ ಡಿಸ್ಟ್ರಿಕ್ಟ್.

ಇನ್ಸ್ಟಿಹಾತ್ನಾಮಾ.

ತಾರೀಖು 2ನೆ ಮಾರ್ಚಿ 1904.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಕೊಳೇನರಸೀಪುರದ ಟರ್ಫ್ ಅಭಿವೃದ್ಧಿಗೋಸ್ಕರ ಇದಕ್ಕೆ ಲಗತ್ತಿರುವ ಷೆಡ್ಯೂಲ್ ಪಟ್ಟಿಯಲ್ಲಿ ವಿವರಿಸಿರುವ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡಿರುತ್ತೆಯಲ್ಲದೆ ಆಯಾಯ ಜಮೀನುಗಳಿಗೆ ಶರಾವಾಗಿರುವ ಪರಿಹಾರದ ಮೊಬಲಗನ್ನು ಸದರಿ ಮೊಬಲಗನ್ನು ತೆಗದುಕೊಳ್ಳಲು ತಮಗೆ ಹಕ್ಕಿರುವದಾಗಿ ತಿಳಿಸುವವರ ಹೆಸರನ್ನು ಪಟ್ಟಿಯಲ್ಲಿ ಕಾಣಿಸಿರುತ್ತೆ.

ಈ ಕೆಳಗೆ ಕಂಡ ಪಟ್ಟಿಯಲ್ಲಿ ನಮೂದಿರುವ ಜಮೀನುಗಳಿಗೆ ವಿಧಿಸಿರುವ ಕಂದರ್ಷೇರ್ಷೆ ಮೊಬಲಗನ್ನು ಪಡಿಯಲು ಸದರಿ ಪಟ್ಟದು 3ನೆ ಕಲಂನಲ್ಲಿ ತೋರಿಸಿರುವವರಲ್ಲದೆ ಯಾರಿಗಾದರೂ ಹಕ್ಕುದಾರಿ ಇರುವಲ್ಲಿ ತಕ್ಕ ದಾಖಲಾತುಗಳೊಡನೆ ಈ ಇನ್ಸ್ಟಿಹಾರ್ ತಾರೀಖು ಲಾಗಾಯತು ಮೂರು ತಿಂಗಳೊಳಗೆ ಹಾಸನ ಡಿಸ್ಟ್ರಿಕ್ಟ್ ಜನರಲ್ ಅಸಿಸ್ಟೆಂಟ್ ಕಮಿಷನರವರಲ್ಲಿ ಹಾಜರಾಗಿ ಅವರ ಹಕ್ಕುದಾರಿಯನ್ನು ಊರ್ಜಿತ ಪಡಿಸಿಕೊಳ್ಳದೆ ಇದ್ದಲ್ಲಿ ಮೇಲ್ಕಂಡ ಪಟ್ಟಿಯ 3ನೆ ಕಲಂನಲ್ಲಿ ತೋರಿಸಿರುವವರಿಗೇನೆ ಮೊಬಲಗನ್ನು ಪಾವತಿ ಮಾಡುತ್ತೇನೆ. ನಂತರ ಬರುವ ತಕರಾರುಗಳನ್ನು ಅಂಗೀಕರಿಸಲಾರೆವು.

ಷೆಡ್ಯೂಲ್.

ನಂಬರು.	ಜಮೀನು ತಪ್ಪೀಲ್ ಮತ್ತು ವಿಸ್ತೀರ್ಣ.	ತೀರಾಯಿಸಿರುವ ಪರಿಹಾರದ ಮೊಬಲಗು.	ಮೊಬಲಗು ಪಡಿಯಲು ಹಕ್ಕಿರುವದಾಗಿ ಕೇಳುವವರ ಹೆಸರು ಮತ್ತು ಅವರ ಹಕ್ಕಿನ ತರಹಾ.
1	26 × 8 = 208 ಸಲೆ ಗಜ ವಿಸ್ತೀರ್ಣವುಳ್ಳ ಪಾಳು ನಿವೇಕನ. (ಖಾತೇದಾರ ಬಳ್ಳಿ)	13—0—0	ಶ್ರೀನಿವಾಸಾಚಾರು, ಕ್ರಯದಾರರಾಗಿ
2	19—4—1900ನೆ ಮಾರ್ಚ್ಹಿ ಮೈಸೂರ ಗೆಜೆಟ್ಟಿನಲ್ಲಿ 34 ಮತ್ತು 35ನೆ ಕೇಸುಗಳಾಗಿ ಘೋಷಿಸಿರುವ ಗೋರವ ಮತ್ತು ಗೊರವೈಯ್ಯನ ಬಾಬತು ಮನೆ ಮತ್ತು ಹಿತ್ತಲು. (ಖಾತೆ ಪೋವರ್ಕಿಯರ್ ಧರ್ಮ ಕಿಂಗ್ಸುವರ ಹೆಸರಿನಲ್ಲಿದೆ)	76—4—0 222—8—0	1. ಮೈಲ್ಲಾರಿ 2. ನಿಂಗಿ ಪ್ರಸಕ್ತವಾದ ಜಮೀನು ಎಂಡು ತಾಕುಗಳ ಕ್ರಯದಾರರಾಗಿ ಖಾದ್ರಿಕಟ್ಟಿ, ಕ್ರಯದಾಕನಾಗಿ
3	19—4—1900ನೆ ಮಾರ್ಚ್ಹಿನ ಬಾಬತು ಮೈಸೂರ ಗೆಜೆಟ್ಟಿನಲ್ಲಿ 9ನೆ ನಂಬರು ಕೇಸಾಗಿ ನೋಟಿಫಿಕೇಷನ್ನಿನ ಘೋಷಿಸಿರುವ ಜಮೀನು ಸರ್ವೇ ನಂಬರು 94 (ಪೈಕಿ) ಖಾತೆ ಪುಟ್ಟನರಸಿಹ್ಮಯ್ಯನ ಹೆಸರಿನಲ್ಲಿದೆ.		

ಕೆ. ಮತ್ತಾಯ್,
ಫಾರ್ ಡೆಪ್ಯುಟಿ ಕಮಿಷನರ್.

ತಾರೀಖು 10ನೆ ಮಾರ್ಚಿ 1904.

ಸಕ್ಕಲ ಜನಗಳಿಗೂ ತಿಳಿಯುವ ಬಗ್ಗೆ (ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದರಡಿ ಕಂಡ ತಕ್ತೆಯಲ್ಲಿನ ಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮಪ್ರಕಾರ ಜಪ್ತೀ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿಗ್ಯಾನುದ ಪೈಕಿ $\frac{1}{8}$ ಮೂರನೆ ಬಂದುಭಾಗ ವೃತ್ತಿಯನ್ನು ಇದರಡಿ ಕಂಡ ತಕ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸದರೀ ತಾರೀಖಿನಲ್ಲಿ ಬೆಳ್ಗ್ಯೆ 11 ಘೆಂಟೆಗೆ ಹರಾಜು ಪುರುವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಬಾಸ್ತು ದಾರರಿಗೆ ಹರಾಜ್ ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಿಷ್ಟಾನುಸಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ವ ಲುಕ್ಸಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಖ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ಯಸ್ಥರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚಿತನಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜಿ ಮುಕೂಫ್ ಮಾಡಲ್ಪಡತಕ್ಕದ್ದು.

7. ಡೆಪ್ಯುಟಿ ಕಮ್ಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜನ್ನು ಡೆಪ್ಯುಟಿ ಕಮ್ಮಿಷನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸುಧರ್ದು ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮ್ಮಿಷನರವರಿಂದ ರುಜು ಮೋಹರ್ ಮಾಡೋಣಾದ ಬಂದು ಸರಟಿಫಿಕೇಟ್ ಆತನಿಗೆ ಕೊಡಲ್ಪಡುವದು. ತಪಶೀಲಿನ ಲ್ಲಾಗಲಿ ಅಂದಾಜಾ ಬೀಜವರೀ ವಿಷಯವಲ್ಲಾಗಲೀ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ಲುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಗವರ್ನ್ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂಥಾ ಅಪ್ಪೀಲಿನಲ್ಲಿ ಆಗುವ ಆರ್ಡರ್ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ತಾಲ್ಲೂಕು	ಹೋಬಳಿ	ಜೋಡಿ ಹರಳಹಳ್ಳಿ ಗ್ರಾಮ	ಜೋಡಿದಾರನ ಹೆಸರು	ಅಂದಾಜಾ ಬೀಜವರಿ	ಅಂದಾಜಾ ಹುಟ್ಟುವಳಿಯ ಯಾ ಬೀಜಕ್ಕು	ಸಾಲಿಯಾನಾ ಸರಕಾರ ಕೊಡಬೇಕಾದ ಕಿಸ್ತು	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕಿ	ಹರಾಜು ತಾರೀಖು ವಗೈರೆ
			ಸುಬ್ಬಾಯ ವಗೈರೆ	ಎ. 457	ಗು. 14	ರೂ. 267	ಆ. 12	ಪೈ. 0
			ಖುಷ್ಕಿ ..	11	29	11	8	0
			ತರಿ ..	0	9	1	0	0
			ಬಾಗಾಯತು ...	47	1	0	12	0
			ಪರಂಪೋಕು ...					
			ಜಮ್ಲಾ ..	516	13	281	0	0
			ಈ ಗ್ರಾಮದ ಪೈಕಿ ½ ಭಾಗ ವೃತ್ತಿ.					

ರೂ. ಆ. ಪೈ. 183—0—0

246— 6—0 ವಿಕಾರಿ ಸಾಲ್ ಲಾಗಾಯತು ಶುಭ್ರ ಕೃತುವರಿಗೆ

1— 8—0 ಪ್ರೊಸೆಸ್ ಫೀ

247—14—0

ತಾಲ್ಲೂಕು ಕಛೇರಿ ರೂಪಾವರಮು ಜನರಲ್ ಕಮಿಷನರವರು 10—5—1904ನೆ ಮಂಗಳವಾರದಲ್ಲಿ ಹರಾಜು ಜರಿಗಿಸುತ್ತಾರೆ.

ತಾರೀಖು 10ನೆ ಮಾರ್ಚ್ 1904.

ಸಕಲ ಜನಗಳಿಗೂ ತಿಳಿಯುವ ಬಗ್ಗೆ (ಇದರಿಂದ ಪ್ರಕಟಿಸಲ್ಪಡುವದೇನಂದರೆ, ಇದರಲ್ಲಿ ಕಂಡ ಶರ್ತ್ತುಗಳಲ್ಲಿ ನಮೂದಿಸಿದ ಪ್ರಕಾರ) ಜೋಡಿದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿಗ್ರಾಮವು ಇದರಲ್ಲಿ ಕಂಡ ಶರ್ತ್ತಿಯಲ್ಲಿ ನಮೂದಿರುವ ಸ್ಥಳದಲ್ಲೂ ಮತ್ತು ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು ಮತ್ತು ಸದರೀ ತಾರೀಖಿನಲ್ಲಿ ಬೆಳ್ಳಿಗ್ಗೆ 11 ಘಂಟೆಗೆ ಹರಾಜು ಮುರುವಾಗಿ ಅಲ್ಲಿಂದ ಯಾವದೂ ಇಲ್ಲದೆ ಗ್ರಾಮವು ಚಡದರಖಾಸ್ತುದಾರರಿಗೆ ಹರಾಜೆ ನಿಲ್ಲುವದ.

2. ಪರಂತು, ಒಂದು ಗ್ರಾಮವು ಬೇರಬೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಿಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮ್ಮಿಷನರವರು ತಮ್ಮ ಯಜಮಾನ್ಯರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನು ಪ್ರತ್ಯೇಕವಾಗಿ ಹರಾಜು ಮಾಡಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗ ಪೈಕೀ ಶೇಕಡಾ 25 ರೂಪಾಯಿ ದಿವಾಣಿಪೆ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ಬಿಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿವಾಜಿಟ್ ಪೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಪೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಪ ಲುಕ್ಸಾನಾಗಿ ಪುರಃ ಹರಾಜು ಹುಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುಕ್ತಾರೀಕರ ತರಫ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿತಕ್ಕದ್ದು. ಮುಕ್ತಾರೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತಿಯರಿಂದ ರುಜು ಮಾಡಲ್ಪಟ್ಟ ಬರವಣಿಗೆ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹೊಣೆ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜು ಆಗುವದಕ್ಕೆ ಮುಂಚೆತವಾಗಿ ಬಡ್ಡಿ ಯಾ ಇತರ ಖರ್ಚುಗಳು ದೇಖೀಲೆ ಕಂದಾಯದ ಬಾಕಿ ಪೊಬಲಗನ್ನು ಪೂರಾ ಹಾಜರ್ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ಕೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜ್ ಮನ್ಸೂಕಾಫ್ ಮಾಡಲ್ಪಡತಕ್ಕದ್ದು.

7. ಡಿಪ್ಯೂಟಿ ಕಮಿಷನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮಾದ್ದಾಗಿರುವದಿಲ್ಲವು.

8. ಕ್ರಯದಾರನು ಕ್ರಯದ ಪೊಬಲಗನ್ನು ಪೂರ್ತಿಯಾಗಿ ಪಾವತಿಮಾಡಿ, ಹರಾಜನ್ನು ಡಿಪ್ಯೂಟಿ ಕಮಿಷನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಆತನ ಸ್ವಾಧೀನ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಬಂದು ಸರಟಿಫಿಕೇಟೆ ಆತನಿಗೆ ಕೊಡಲ್ಪಡುವದು. ತಹಶೀಲ್ದಾರ್ಗಳಾಗಲಿ ಅಂದಾಜು ಬೀಜವರೇ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ಲುಕ್ಸಾನ್ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 90 ದಿನಗಳೊಳಗಾಗಿ ಗೌರ್ಮೆಂಟಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ. ಅಂಥಾ ಅಪ್ಪೀಲನಲ್ಲಿ ಆಗುವ ಆಜ್ಞೆಯೆ ಹುಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ಡಿವಿಷನ್	ತಾಲ್ಲೂಕು	ಹೋಬಳಿ	ಗ್ರಾಮ	ಜೋತೀದಾರನ ಹೆಸರು	ಅಂದಾಜು ಪೈಪಟ್ಟಿ ದಾಖಲೆ	ಅಂದಾಜು ಹರಾಜಿನ ಪೈಪಟ್ಟಿ	ಸರಿಯಾದ ಸರ್ಕಾರಿ ಕಂದಾಯದ ಪೈಪಟ್ಟಿ	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡತ್ತೋ ಅಂಥಾ ಸರ್ಕಾರದ ಕಂದಾಯದ ಬಾಕಿ.	ಹರಾಜು ತಾರೀಖು ವಗೈರೆ.
					ಎ. ಗು.	ರೂ. ಆ. ಪೈ.		ರೂ. ಆ. ಪೈ.	
ಹಾಸನ	ಹಾಸನ	ಸಲಗಾಮೆ	ಹೊಸಹಳ್ಳಿ	ಲಕ್ಷ್ಮೀನಾರಾಯಣಭಟ್ಟ ಮೈನ್ಹಳ್ಳಿ	ಖುಷ್ಕಿ ... 853 ಗು ತರಿ ... 59 34 ಗು ಬಾಗಾಯತು 28 17 ಬಂಜರು ... 117 35 ಜುಮ್ಲಾ ... 1059 11	ಕ್ಯಾಟೆರಂಟ್ 346 0 0 ಲೋಕಲ್ 55 12 3 ಫೀಜು ಜುಮ್ಲಾ ... 401 12 3	ಶಿಸ್ತು ಪ್ರವ ಕ್ಷಯಕೃತು ಜುಮ್ಲಾ ... ಪೊಸ್ಟೇಜ್ ಫೀ	120 8 1 392 15 2 401 12 3 915 3 6 1 0 0 916 3 6	ಹಾಸನದ ತಾಲ್ಲೂಕ್ಕಾಫೀಸಿನಲ್ಲಿ ಪೈಪಟ್ಟಿ ಲಟಿಸ್ಟರ್ ಪ್ರಕಾರ ಪ್ರ ಪಿಷನರವರಿಂದ 10-5-01ನೇ ಮಂಗಳವಾರ

ಕೆ. ದೊರಸಾಮಿ ಅಯ್ಯರ್,
ಡಿಪ್ಯೂಟಿ ಕಮ್ಮಿಷನರ್.

ಜಪ್ತಿಸ್ಥಿರಸ್ಥಿತಿಸ ಹರಾಜಿನ ಇಸ್ತಿಹಾರ ಮತ್ತು ಬರಕಮೂಲಕವಾದ ನೋಟೀಸ್.

"ಲ್ಯಾಂಡ್ ರೆವಿನ್ಯೂ ಕೋಡಿನ 171ನೆ ಪ್ರಕರಣದ ಪ್ರಕಾರ."

ಇದರಡಿ ವಿವರಿಸುವ ನಾರಾಯಣಭಟ್ಟ ವಗೈರೆ 9 ಜನರ ಸ್ವತ್ತು ಸದರಿ ನಾರಾಯಣಭಟ್ಟ ವಗೈರೆ 9 ಜನರಿಂದ ಬರಬೇಕಾದ (1905-6—6) ಪೊಬಲಿಗನ ಸರಕಾರದ ಕಂದಾಯಕ್ಕೋಸ್ಕರ ಜಪ್ತಾಗಿರುವದ್ದರಿಂದ ಮತ್ತು ಸದರಿ ಸ್ವತ್ತಿನ ಹರಾಜಿನಿಂದ ಸದರಿ ಪೊಬಲಗನ್ನು ಸುರಿ ಜಪ್ತಿ ಹರಾಜಿನಿಂದ ಉಂಟಾದ ಎಲ್ಲಾ ಸ್ಯಾಮಾನಾದ ಲಗಾಡುಗಳು ಮತ್ತು ಖರ್ಚುಗಳ ಸಮೇತವಾಗಿ ವಸೂಲು ಮಾಡೋಣ ಜರೂರಾಗಿರುವದ್ದರಿಂದ 1904ನೆ ಇಸವಿ ಏಪ್ರೆಲ್ ತಾಹೆ 20ನೆ ದಿನ ಬೆ 11 ಗಂಟೆಯಲ್ಲಿ ಸಕಲೇಶಪುರದ ಸಬ್ ಡಿವಿಜರ್ಜ್ ಆಫೀಸರವರು ಮುಂಜರುಬಾದು ತಾಲ್ಲೂಕು ಜೋಡಿ ಅಲವಳ್ಳಿ ಗ್ರಾಮದಲ್ಲಿ ಹರಾಜುಮೂಲಕವಾಗಿ

ಯೂ, ನಿರಾತಂಕವಾಗಿಯೂ ಇದ್ದಂತೆ ವಿವರಿಸಿರುವ ಸ್ವತ್ತಿನಲ್ಲಿ ಸದರಿ ನಾರಾಯಣಭಟ್ಟ ವಗ್ಗೆರ ಹಕ್ಕು ಬಾಧ್ಯತೆ ಮತ್ತು ಪ್ರಯೋಜನ ಇವನ್ನು ಮತ್ತೂ ಈಗ ಕಾನೂನಿಗೆ ಅನುಸಾರವಾಗಿ ಸದರಿ ನಾರಾಯಣಭಟ್ಟ ವಗ್ಗೆರವರು ತಮ್ಮ ಸ್ವಂತ ಫಾಯಿದೆಗೋಸ್ಕರ ಹಕ್ಕು ಬಾಧ್ಯತೆ ಮತ್ತು ಪ್ರಯೋಜನ ಅಥವಾ ಇವುಗಳ ಪೈಕಿ ಯಾವದನ್ನಾದರೂ ಅಥವಾ ಅವುಗಳಿಂದ ಹುಟ್ಟುವ ಆದಾಯವನ್ನು ವಿಲೇವಾರಿ ಮಾಡುವದಕ್ಕೋಸ್ಕರ ಚಲಾಯಿಸಬಹುದಾದ ಪ್ರತಿ ಅಧಿಕಾರವನ್ನು ಸಹ ಚತುರವಾಲಿದಾರನಿಗೆ ಖರೀದಿ ಮಾಡುತ್ತಾರೆಂಬ ದಾಗಿ ಈ ಮೂಲಕವಾಗಿ ನೋಟೀಸು ಕೊಟ್ಟಿರುತ್ತದೆ: —

ಲಾಟು ನಂಬರ್.	ಸ್ಥಳ ಮತ್ತು ಸ್ವತ್ತಿನ ವಿವರ.	ಸುಮಾರು ಅಂದಾಜು ಮೊತ್ತಕ್ಕೆ ಗುತ್ತಿಗೆಗೆ ಕೊಟ್ಟಿರುವ ಬಗ್ಗೆ ಸ್ವತ್ತಿನಲ್ಲಿ ಇರುವ ಪ್ರತಿ ಬೆಳೆಗಳಿಗೆ ಅಥವಾ ಸ್ವತ್ತಿಗೆ ಸಂಬಂಧಪಟ್ಟ ಇತರ ವಿಷಯಗಳಿಗೆ.	ಬಾಬು	ಎಕರೆ.	ಆಕಾರ.	ಸರಕಾರಕ್ಕೆ ಒರತ ಕ್ಕ ಬಾಕಿ ಕಂದಾಯ ಸೆಸ್ಸು ವಗ್ಗೈರ.	ಈಗಿನ ಹಿಡುವದಾರರ ಹೆಸರು.	ಇತರ ವಿವರಗಳು.
1	ಜೋಡಿ ಬಲುವ ಮೈ ಗಾ ವ	5,000—0—0	...	ಗ್ರಾಮ ಬಂಜರ್...	141—13	2-0-0 ವಿಕಾರ	121-13-6	ಶ್ರೀಮಂತ ನಾರಾಯಣಭಟ್ಟರವರಿಗೆ ಸೇರಿದ್ದು ಈ ಸ್ವತ್ತಿನ ಹಿಡುವದಾರರಿಂದ ಕ್ರಯಕ್ಕೆ ಕೊಳ್ಳುವದಾಗಿ ಒಪ್ಪಿಗೆ ಕೊಟ್ಟಿರುವ ಸ್ವತ್ತು ಇದು.
				ಖುಷ್ಕಿ	134— 8	21—4-0 ಕಾಸ್ಟ್	241-12-6	
				ತರಿ	115—25	389—0-0 ಟ್ಯಾಸ್	241-12-6	
				ತೋಟ..	1—11	0-4-0		
					412—8-0	605—6—6		
					ನೋಟೀಸು ಫೀ..	2—0—0		
						607—6—6		

ಹರಾಜು ತಾರೀಖು ವಗೆ ಬಡ್ಡಿ ಬರ ಪೇಕು

ಇನಾಮದಾರ ನಾರಿಯಣಭಟ್ಟರವರಿಗೆ ಸೇರಿದ್ದು ಈ ಸ್ವತ್ತಿನ ಹಿಡುವದಾರರಿಂದ ಕ್ರಯಕ್ಕೆ ಕೊಳ್ಳುವದಾಗಿ ಒಪ್ಪಿಗೆ ಕೊಟ್ಟಿರುವ ಸ್ವತ್ತು ಇದು

ಗ್ರಾಮದ ಜಮೀನು ಅಬಾದು ಒಟ್ಟು ಗ್ರಾಮವನ್ನೆ ದೀಡು ಮಾಡಿಕೊಂಡು ಸರ್ಕಾರದಿಂದ ಕಂತುವಾರಾಗಿ ಕೊಟ್ಟಿರುವ ಸಾ ಲದ ವಿಮೆಲನು 6,000—0—0 ಬಟ್ಟು ಜುಮ್ಲಾ 6,607-6—6.

ಆದುದೊತ್ತು ಈ ಒಟ್ಟೆ ವಿಧಾಯಕವಾದಂತೆ ಮುಂದೆ ಹರಾಜು ತಾರೀಖು ವರಿಗೆ ಲೆಕ್ಕಾಚಾರದರೀತ್ಯಾ ಆಗುವ ಬಡ್ಡಿಯು ಸಹ ಬರಬೇಕಾಗಿದೆ.

ವರಾ:— ಸದರಿ ನಾರಾಯಣಭಟ್ಟ ವೈರಿಗೆ ಬಾಧ್ಯತೆಯನ್ನು ಕುರಿತು ಅಥವಾ ನಿನೆ ಯಿವರು ಬರಬೇಕೆಂಬುವ ಹಕ್ಕುಗಳು ಲಾಗವಡುಗಳು ಅಥವಾ ಪ್ರಯೋಜನ ಇವುಗಳಲ್ಲಿ ಯಾವುವರ ಸಲುವಳಿಯನ್ನು ಕುರಿತಾದರೂ ಬರವಸೆಯನ್ನು ಕೊಟ್ಟಿರುವದಿಲ್ಲಾ.

ಬಿ. ರಾಮಸ್ವಾಮಿಯ್ಯಾ,
ಫೌರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟ್.

ತಾರೀಖು 5ನೆ ಮಾರ್ಚಿ 1904.

ಸ್ ೧೯೦೪ನೆ ಇಸವಿ ಫೆಬ್ರವರಿ ತಾರೀಖು 25ನೆ ಮೈಸೂರ ಗೆಜೆಟಿ 2ನೆ ಭಾಗದ 149-150-151ನೆ ಪುಟಗಳಲ್ಲಿ ಪ್ರಾಯಿಷಿಗಿರುವ ಇನ್ಸ್ಟಿಹಾರ್ನಾಮೆಯಲ್ಲಿ ನಮೂದಿರುವ ಶಿವಮೊಗ್ಗಾ ಡಿಸ್ಟ್ರಿಕ್ಟ್ ಸಬ್ ರಿಜಿಸ್ಟ್ರಿ ಆಫೀಸುಗಳಲ್ಲಿ ದೀರ್ಘವಾಗಿ ನಿಂತಿರುವ ದಸ್ತಾವೇಜುಗಳನ್ನ ಇನ್ಸ್ಟಿಹಾರ್ನಾಮೆಯು ಗೆಜೆಟ್ಟಿನಲ್ಲಿ ಪ್ರಾಯಿಷಾದ ತಾರೀಖು ಲಾಗಾಯಿತು ಒಂದು ತಿಂಗಳು ಅವಧಿಯೊಳಗೆ ವಾಪಸು ಪಡಿಯಲಿದ್ದಲ್ಲಿ ನಾಶಪಡಿಸಿಬಿಡುತ್ತಾದ ಸಂಗತಿ ಈ ಮೂಲಕ ತಿಳಿಸಿರುತ್ತದೆ.

ಎಂ. ಎಸ್. ನಾರಾಯಣರಾವ್, ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್.

ಕಡೂರು ಡಿಸ್ಟ್ರಿಕ್ಟ್.

ನೋಟಿಸ್.

ಸ್ ೧೯೦೪ನೆ ಇಸವಿ ಮಾರ್ಚಿ ತಾರೀಖು 10, ಚಿಕ್ಕಮಗಳೂರು.

ಮೂಡಿಗೆರೆ ತಾಲ್ಲೂಕಿನಲ್ಲಿ ಇರುವ ತಮ್ಮ ಬಾಳೂರು ಕಾಫಿ ಯೆಸ್ಟೇಟಿಗೆ ಕೆಲವು ಕಾಡು ದನಗಳ ಗುಂಪುಗಳು ಬಂದು ಕೆಸ ರು ಮಾಡುತ್ತವೆ ಎಂತಲೂ ಅವುಗಳನ್ನು ಹಿಡಿದು ದೊಡ್ಡಿಗೆ ಕಳಿಹಿಸುವದಕ್ಕೆ ಅನುಕೂಲವಾಗಿ ಇರುತ್ತೆಂತಲೂ, ಸದರಿ ಎಸ್ಟೇಟಿ ನವರು ಜರ್ಮ್ಸ್ ಆಲ್ಕ್ಹಿನ್ಸ್ ಸಾಹೇಬರವರು ಫಿರ್ಯಾದು ಮಾಡಿದ್ದರಮೇಲೆ ಸದರಿ ಜಾನುವಾರುಗಳ ವಿಲೇಕರುಗಳು ಅವುಗಳನ್ನು ಹಿಟ್ಟು ಹಾಕಿಕೊಳ್ಳದೆ ಹೋದಲ್ಲಿ ಅವುಗಳನ್ನು ನಾಶ ಪಡಿಸುವ ಬಗ್ಗೆ ಲೈಸೆನ್ಸು ಕೊಡಲ್ಪಡತಕ್ಕದ್ದು ಎಂದು [illegible]

ನೋಟಿಸು ಕೊಟ್ಟಿರುತ್ತದೆ [illegible]